ಬ್ಲಾಕಿಯ ಚಲನವಲನವನ್ನು ಗಮನಿಸಲು ಇತರೆ ಪ್ರಾಣಿಪಕ್ಷಿಗಳ ಎಚ್ಚರಿಕೆಯ ಧ್ವನಿ (ಕಾಲ್)ಗಳನ್ನು ಅವಲಂಬಿಸಿ, ಮುಂದೆ ಸುಮಾರು ಐವತ್ತು ಮೀಟರ್ ಸಾಗಿದೆವು. ಎದುರಿಗೆ ಸಿಕ್ಕ ಬೇರೊಂದು ಜೀಪಿನ ಚಾಲಕನಿಗೆ, 'ಬ್ಲಾಕಿ ರಸ್ತೆ ದಾಟುವ ಚಾನ್ಸ್ ಇದೆ, ಗಮನಿಸು' ಎಂದು ಮಾಹಿತಿ ನೀಡಿ ಮುಂದುವರಿದೆವು. ಇನ್ನೂ ಐದು ನಿಮಿಷ ಕೂಡ ಆಗಿಲ್ಲ, ಅಷ್ಟರಲ್ಲಿ ನಮಗೆ ಎದುರಾಗಿದ್ದ, ನಾವೇ ಮಾಹಿತಿ ನೀಡಿದ್ದ ವಾಹನಕ್ಕೆ ಬ್ಲಾಕಿ ಸಿಕ್ಕಿದ್ದಾನೆ! 'ನಡು ರಸ್ತೆಯಲ್ಲೇ ಕುಳಿತಿದ್ದಾನೆ' ಎಂಬ ಮಾಹಿತಿ ಸಿಕ್ಕಿತು. ರಾಜೇಶ್ ಜೀಪನ್ನು ವಾಪಸ್ ತಿರುಗಿಸಿ ಸೊಂಯ್ ಎಂದು ಹೊರಟರು.

ಓಹ್... ಲೌಲಿ, ಎಂದುಕೊಂಡು ಗಡಿಬಿಡಿಯಲ್ಲಿ ಕ್ಯಾಮೆರಾ ಸೆಟ್ ಮಾಡಿಕೊಳ್ಳುತ್ತ ಹೊರಟೆವು. ಹೆಚ್ಚೆಂದರೆ ನೂರು ಮೀಟರ್ ದೂರದಲ್ಲಿ ನಾವಿರಲಿಲ್ಲ. ವಾಪಸ್ ಬ್ಲಾಕಿ ಕುಳಿತಿದ್ದ ಸ್ಥಳಕ್ಕೆ ಹೋಗುವ ನಡುರಸ್ತೆಯಲ್ಲಿ ವಿಶ್ರಮಿಸಿ, ರಸ್ತೆ ಪಕ್ಕದಲ್ಲೇ ಬಿದ್ದು ಹೋಗಿದ್ದ ಒಣಮರಕ್ಕೆ ಸೆಂಟ್‌ಮಾರ್ಕ್ ಮಾಡಿ (ತನ್ನ ಜಾಗದ ಗಡಿ ಪ್ರಭುತ್ವಕ್ಕೆ ಮೂತ್ರ ವಿಸರ್ಜಿಸಿ ಬೇರೆ ಒಂದು ಚಿರತೆ ಅಲ್ಲಿಗೆ ಬಾರದಂತೆ ಸೂಚಿಸುವುದು. ಹೀಗೆಯೇ ಹುಲಿ ಕೂಡ ಸೆಂಟ್‌ಮಾರ್ಕ್ ಮಾಡುತ್ತದೆ) ಮತ್ತೆ ಕಾಡಿನೊಳಗೆ ನುಸುಳಿದ್ದಾನೆ. ಈ ಸುದ್ದಿಯಿಂದಾಗಿ 'ಛೇ... ಮಿಸ್ ಆಯ್ತಲ್ಲ ಸಾರ್...' ಎಂದುಕೊಂಡೆವು ಪರಸ್ಪರ.

ಭಾಗಶಃ ನಮ್ಮ ಇರುವಿಕೆಯನ್ನು ಗಮನಿಸಿದ್ದ ಬ್ಲಾಕಿ ನಾವು ಹೊರಟ ಸ್ಥಳದಲ್ಲಿಯೇ ಕುಳಿತು ಬೇರೆ ಪ್ರವಾಸಿಗರಿಗೆ ದರ್ಶನ ನೀಡಿದ್ದ ಘಟನೆಯಿಂದ ಜೋಲು ಮುಖಹಾಕಿಕೊಂಡು, ಮತ್ತೆ ಬ್ಲಾಕಿಗಾಗಿ ಹುಡುಕುತ್ತಾ ಹೊರಟೆವು.

ಬೇಸಿಗೆಯ ಈ ದಿನಗಳಲ್ಲಿ ಕಾಡಿಗೆಕಾಡೇ ಬೆತ್ತಲಾಗಿ ನಿಂತಿದೆ. ನೆಲವೆಲ್ಲ ಒಣಗಿದ ಹುಲ್ಲು, ತರಗು ಎಲೆಗಳಿಂದ ಆವರಿಸಿದೆ. ಇದೆಲ್ಲವನ್ನೂ ನೋಡಿ ಬಸವಣ್ಣನ ವಚನ ಮನದಲ್ಲಿ ಮೂಡಿತು. 'ಮನೆಹತ್ತಿ ಉರಿದರೆ ನಿಲಬಹುದು ಧರೆ ಹತ್ತಿ ಉರಿದರೆ ನಿಲಬಹುದೆ...' ಅಂದುಕೊಂಡು, ಸದ್ಯ ಬೆಂಕಿಯ ಕೆನ್ನಾಲಿಗೆ ಕಾಡನ್ನು ಸುಡದಿರಲಿ ಎಂದುಕೊಳ್ಳುತ್ತಿರುವಾಗ, ಕಾಡಿನ ಮಧ್ಯದಲ್ಲಿ ಸಿಂಗಳೀಕ (ಲಂಗೂರ್) ಕ್ವಕ್ ಕ್ವಾಕ್ ಕ್ವಾವ್ವಾ... ಎಂದು ಸೂಚನೆ ನೀಡಿದ. ಬಿಳಿ ಚುಕ್ಕೆಯ ಜಿಂಕೆಯ (**Spotted Deer**) ಕಾವ್ ಕೋವ್ ಕೋವ್ ಎನ್ನುವ ಧ್ವನಿ ಕೂಡ ನಮ್ಮ ಕಿವಿಗಳನ್ನು ನಿಮಿರಿಸಿತು. ಧ್ವನಿಯನ್ನು ಆಲಿಸುತ್ತ ಹೊರಟ ನಾವು ಕಪ್ಪು ಬಣ್ಣದಲ್ಲಿ ಕಂಡಿದ್ದೆಲ್ಲವನ್ನೂ 'ಬ್ಲಾಕಿ' ಎಂಬಂತೆ ಮರೀಚಿಕೆ ನೋಟದಲ್ಲಿ ಸಿಲುಕಿದೆವು. ಮರದ ಕೊಂಬೆ ಕಾಡಿನ ಹಾದಿಗಳನ್ನೆಲ್ಲ ಸ್ಕ್ಯಾನ್ ಮಾಡುತ್ತಿದ್ದ ನಮ್ಮ ಮನಸ್ಸು ಕಣ್ಣುಗಳೆಲ್ಲ ಹತಾಶೆಯ ಮಟ್ಟಕ್ಕಿಳಿದಿದ್ದವು.

ನಾಗರಹೊಳೆ ಕಾಡಿನಲ್ಲಿ ಬ್ಲಾಕಿಯದೇ ಕನಸು. ಈ ಕಾಡಿನಲ್ಲಿ ಪ್ರವಾಸಿಗರಿಗೆ – ಛಾಯಾಗ್ರಾಹಕರಿಗೆ ಬ್ಲಾಕಿ ಪ್ರತ್ಯಕ್ಷವಾದರೆ ಜೀವನ ಪಾವನವಾಯಿತೆಂಬ ಸಂಭ್ರಮ. ಇಡೀ ಕಾಡಿಗೆ ಒಬ್ಬನೇ ಬ್ಲಾಕಿ.

'ಬ್ಲಾಕಿ' ಸಾಮಾನ್ಯ ಚಿರತೆಯಾದರೂ ಇತರೆ ಚಿರತೆಗಿಂತ ಯಾಕೆ ಭಿನ್ನ ಎಂದರೆ, ಅದರ ಇಡೀ ಮೈ ಬಣ್ಣ ಕಡುಕಪ್ಪು, ಹಳದಿ ಕಣ್ಣುಗಳು. ಬೇರೆ ಚಿರತೆಯಂತೆಯೇ ಇದೂ ಕೂಡ ಸಹಜ ಜೀವನ ನಡೆಸಿದರೂ ಇಡೀ ದೇಹ ಕಪ್ಪಾಗಿರುವುದೇ ಇದರ ವಿಶೇಷ. ಮನುಷ್ಯರಿಗೆ ಚರ್ಮದಲ್ಲಿ ತೊನ್ನು ಬಂದು ದೇಹವಿಡೀ ಚರ್ಮ ಹೇಗೆ ಬೆಳ್ಳಗಾಗಿರುತ್ತದೆಯೋ ಹಾಗೆಯೇ ಚಿರತೆ ಕಪ್ಪು ಬಣ್ಣಕ್ಕೆ ಬದಲಾಗಿರುತ್ತದೆ. ಇದಕ್ಕೆ ಜನಿಸಿದ ಮರಿಗಳೆಲ್ಲ ಹಲವು ಸಾರಿ ಕಪ್ಪುಬಣ್ಣದಲ್ಲಿ ಹುಟ್ಟದಿದ್ದರೂ, ವಂಶವಾಹಿನಿಯಲ್ಲಿ ಯಾವುದೋ ಚಿರತೆಮರಿಗೆ 'ಮೆಲನಿನ್ ಪಿಗ್‌ಮೆಂಟ್ಸ್'ಗಳು ಏರುಪೇರಾಗುವುದರಿಂದ ಕಪ್ಪಾಗಿ ಹುಟ್ಟಬಹುದು. ಇಂಥ ಅಪರೂಪದ ಚಿರತೆಯನ್ನು ಇಂಗ್ಲಿಷ್‌ನಲ್ಲಿ 'ಬ್ಲಾಕ್ ಪ್ಯಾಂಥರ್' (ಬ್ಲಾಕ್ ಲೆಪರ್ಡ್) ಎನ್ನುತ್ತಾರೆ. ಕನ್ನಡದಲ್ಲಿ 'ಕಪ್ಪು ಚಿರತೆ' ಎನ್ನುತ್ತಾರೆ. ಕಬಿನಿಯ ಈ ಕಪ್ಪುಚಿರತೆಗೆ 'ಬ್ಲಾಕಿ' ಎಂದು ಪ್ರವಾಸಿಗರು, ನಿಸರ್ಗಪ್ರಿಯರು ಕರೆದಿದ್ದಾರೆ.

ಈ ಕಪ್ಪುಚಿರತೆಯ ಬದುಕಿನ ಹೋರಾಟಗಾಥೆಯನ್ನು ವಿಶ್ವಪ್ರಸಿದ್ಧ ವನ್ಯಜೀವಿ ಚಾನೆಲ್‌ಗಳು ಸೆರೆಹಿಡಿದು ಜನಸಾಮಾನ್ಯರಿಗೆ ತೋರಿಸಿವೆ. ಈ ಕಪ್ಪುಚಿರತೆ ಜನಸಾಮಾನ್ಯರ – ಛಾಯಾಗ್ರಾಹಕರ ಡಾರ್ಲಿಂಗ್ ಆಗಿದೆ. ಆದರೂ ಯಾಕೋ ನನಗೆ, ಕಾಡಿನ ವೈವಿಧ್ಯತೆಯಲ್ಲಿ ಅದೂ ಕೂಡ ಒಂದು ಸಾಮಾನ್ಯ ಸಂಗತಿಯಾಗಿ ಮಾತ್ರ ನನ್ನ ಮನದಲ್ಲಿ ನೆಲೆಯೂರಿದೆ.

ಕಾಡನ್ನು ಭಿನ್ನವಾಗಿ ಗ್ರಹಿಸುವ ಆತುರ ಕಾತರ ನನ್ನೊಳಗೆ ಇದ್ದೇ ಇದೆ. ನನ್ನೊಳಗಿನ ಕಾಡು ಪ್ರತಿದಿನದ ಅಚ್ಚರಿ ಸಂಗತಿಗಳನ್ನು ನೀಡುತ್ತಿರುವುದರಿಂದ ಕಾಡಿನ ಪಯಣದಲ್ಲಿ ಇರುವೆ, ಗೊದ್ದ, ಜೇಡ, ಜೇಡರಬಲೆ, ಕಾಡುಹೂವು, ಹಸಿರಿನಿಂದ ಮೈದುಂಬಿಕೊಳ್ಳುವ ಗಿಡಮರಗಂಟೆಗಳ ವರ್ಣಮಯ ಎಲೆಗಳು, ಎಲೆಗಳನ್ನೆಲ್ಲ ಕಳಕೊಂಡು ಬೆತ್ತಲಾಗುವ ಮರ, ಮರದ ತೊಗಟೆಯ ಮೈವಳಿಕೆ, ಅದರ ವಿವಿಧ ಆಕೃತಿಗಳು ಮೂಡಿಸುವ ಕಾವ್ಯಮಯ ಚಿತ್ರಣಗಳ ಸೌಂದರ್ಯ, ಕಾಡಿನ ಸುವಾಸನೆ ಮನಸ್ಸನ್ನು ಆವರಿಸುತ್ತಿರುತ್ತದೆ. ಮುಂಗಾರಿನ ಮೊದಲ ಮಳೆಯಲ್ಲಿನ ಮಣ್ಣ ಘಮಲು, ನವಿಲ ನೃತ್ಯ, ಚಿಗುರೆಲೆಯ ನೋಟ, ಮರದ ಬುಡದಲ್ಲಿ ಇರುವೆಗಳು ಸೃಷ್ಟಿಸಿದ ವೃತ್ತಾಕಾರದ ಮಣ್ಣಕಾಳುಗಳ ಗುಡ್ಡ, ವಿವಿಧಾಕಾರದ ವರ್ಣಮಯ ಎಲೆಗಳನ್ನು ಗಮನಿಸುವುದೇ ಒಂದು ಆನಂದ.



ನೀರು, ಮುಗಿಲು,
ಮರಗಳ ಬೋಳು...
ಈ ಕೊಲಾಜ್,
ಕಥೆಯೊಂದನ್ನು
ಹೇಳುತ್ತಿರುವಂತಿದೆ...